**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:1567/2023**

| | | |
|---|---|---|
| **ಪಿರ್ಯಾದಿ** | : | ಶ್ರೀ ಭೀಮಯ್ಯ ಸಿ.ಎಸ್,<br>ತಂದೆಃ ಸಿ.ಬಿ.ಸೋಮಯ್ಯ,<br>ವಾಸಃ ನಾಲ್ಕೇರಿ ಗ್ರಾಮ ಮತ್ತು ಅಂಚೆ,<br>ಶ್ರೀಮಂಗಲ, ಪೊನ್ನಂಪೇಟೆ ತಾಲ್ಲೂಕು,<br>ಕೊಡಗು ಜಿಲ್ಲೆ. |
| | | **ವಿರುದ್ಧ** |
| **ಆರೋಪಿ** | : | ಶ್ರೀಮತಿ ಎಮ್.ಎಮ್.ಸೌಮ್ಯ,<br>ತಂದೆಃ ಎಮ್.ಡಿ.ಮಾಚಯ್ಯ,<br>ಕಂಪ್ಯೂಟರ್ ಆಪರೇಟರ್,<br>ನಾಲ್ಕೇರಿ ಗ್ರಾಮ ಪಂಚಾಯತ್,<br>ಶ್ರೀಮಂಗಲ, ಪೊನ್ನಂಪೇಟೆ ತಾಲ್ಲೂಕು. |

**ದಂಡ ಸಂಹಿತೆ ಪ್ರಕ್ರಿಯೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಶ್ನೆ ಸಂಖ್ಯೆ-1:** ಪಿರ್ಯಾದಿಯ ಪರ ಇದುವರೆಗೂ ನುಡಿದ ಎಲ್ಲಾ ಸಾಕ್ಷ್ಯಗಳನ್ನು ಆಲಿಸಿದ್ದೀರಾ?

ಉಃ ಕೇಳಿದ್ದೇನೆ.

**ಪ್ರಶ್ನೆ ಸಂಖ್ಯೆ-2:** ಪ್ರಾ.ಸಾಃ1 ಶ್ರೀ ಭೀಮಯ್ಯ ಸಿ.ಎಸ್, ಪಿರ್ಯಾದುದಾರರು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ಪರಿಚಯಸ್ಥರಾಗಿದ್ದು, ತಮ್ಮ ಆರ್ಥಿಕ ಅಗತ್ಯತೆಗಾಗಿ ಅವರ ಬಳಿ 2019, 2020 ಮತ್ತು 2021 ರ ಇಸವಿಗಳಲ್ಲಿ ಒಟ್ಟು ರೂ.5,30,000/- (ಐದು ಲಕ್ಷ ಮೂವತ್ತು ಸಾವಿರ ರೂಪಾಯಿಗಳು) ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ನಂತರ ಪಿರ್ಯಾದಿಯವರು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ದಿಃ10.07.2023 ರ ಕೆನರ ಬ್ಯಾಂಕ್, ಗೋಣಿಕೊಪ್ಪ ಶಾಖೆಯ ನಿಮ್ಮ ಖಾತೆಯ 460757 ನಂಬರಿನ ಚೆಕ್ ಅನ್ನು ಸಾಲದ ಭಾದ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್‌ನ ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಅಫ್ ಇಂಡಿಯಾ ಶಾಖೆಗೆ ಹಾಜರುಪಡಿಸಿದಾಗ, ಅವರು ದಿಃ30.09.2023 ರಂದು "Account Closed" ಎಂದು ಹಿಂಬರಹವನ್ನು ನೀಡಿರುತ್ತಾರೆ. ನಂತರ ಪಿರ್ಯಾದಿಯವರು ತಮ್ಮ ವಕೀಲರ ಮೂಲಕ ದಿಃ30.10.2023 ರಂದು 15 ದಿನಗಳೊಳಗೆ ಚೆಕ್ ನ ಹಣವನ್ನು ಹಿಂತಿರುಗಿಸುವಂತೆ ಕಾನೂನು ರೀತಿಯಲ್ಲಿ ನೋಟೀಸನ್ನು ನೀಡಿದ್ದರೂ ಸಹ ಆರೋಪಿಯಾದ ನೀವು ಚೆಕ್‌ನ ಹಣವನ್ನು ಹಿಂದಿರುಗಿಸದೇ ಇರುವ ಕಾರಣ ಅವರು ನಿಮ್ಮ ವಿರುದ್ಧ ದೂರನ್ನು ನೀಡಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಮತ್ತು ಸಾಕ್ಷಿಯು ನಿ.ಪಿ.1 ಚೆಕ್ಕನ್ನು, ನಿ.ಪಿ.2 ಬ್ಯಾಂಕ್ ಹಿಂಬರಹವನ್ನು, ನಿ.ಪಿ.3

ವಕೀಲರ ಮೂಲಕ ನೀಡಿದ ನೋಟೀಸನ್ನು, ನಿ.ಪಿ.4 ಪ್ರತ್ಯುತ್ತರ ನೋಟೀಸನ್ನು, ನಿ.ಪಿ.5 Corrigendum ಅನ್ನು, ನಿ.ಪಿ.6 ಬ್ಯಾಂಕ್ ಪಾಸ್ ಬುಕ್ಕನ್ನು, ನಿ.ಪಿ.7 ಪಹಣಿಯನ್ನು, ನಿ.ಪಿ.8 ರಿಂದ 16 ಬ್ಯಾಂಕ್ ಚಲನ್‌ಗಳನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ **ಸುಳ್ಳು.**

**ಪ್ರಶ್ನೆ ಸಂಖ್ಯೆ-3:** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ **ಇದೆ.**

**ಪ್ರಶ್ನೆ ಸಂಖ್ಯೆ-4** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಪಾಟೀ ಸವಾಲಿನಲ್ಲಿ ನನ್ನ ವಕೀಲರು ಕೇಳಿರುವಂತೆ, ನನ್ನ ಕೇಸಾಗಿರುತ್ತದೆ, ಸುಳ್ಳು ದೂರು ಕೊಟ್ಟಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ದಿಃ17.03.2026 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

Sd/-

ಸ್ಥಳಃ ಪೊನ್ನಂಪೇಟೆ,
ದಿನಾಂಕಃ 17.03.2026

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ಪೊನ್ನಂಪೇಟೆ.